ಯಾವುದೋ ಸಕಾರಣ ಇರಬಹುದು.

ಹಪ್ಪಳ, ಸಂಡಿಗೆ ಮಾಡಿ ಒಣಗಿಸುವ ಕಾಲದಲ್ಲಿ ಕಾಗೆಗಳಿಗೆ ಹಿಡಿಶಾಪ ಹಾಕುತ್ತಾ ಅವು ಸನಿಹ ಸುಳಿಯದಂತೆ ಕಾವಲು ಕಾಯುವ ಜನ ತಮ್ಮ ನಂಬಿಕೆಯ ಸಂದರ್ಭಗಳಲ್ಲಿ ಅವುಗಳ ಆಗಮನಕ್ಕೆ ಹಂಬಲಿಸುವುದು ವೈಪರೀತ್ಯ. ಮಹಾಲಯ ಅಮಾವಾಸ್ಯೆಯ ದಿನ ಪೂರ್ವಜರ ಹೆಸರಲ್ಲಿ ಎಡೆ ಇಡುವುದು ಅನೇಕರ ಸಂಪ್ರದಾಯ. ಆ ದಿನ ಒಂದೇ ಒಂದು ಕಾಗೆಯ ತಲೆ ಕೂಡಾ ಕಾಣಲಿಲ್ಲ ಎಂದು ಆಸ್ತಿಕರೊಬ್ಬರು ಪರಿತಪಿಸುತ್ತಿದ್ದುದು ವಾಕಿಂಗಿನ ಸಂದರ್ಭದಲ್ಲಿ ಕಿವಿಯ ಮೇಲೆ ಬಿತ್ತು. ಮತ್ತು ಅವರ ಜೊತೆಗಾರರು ಇದಕ್ಕೆ ಕೊಟ್ಟ ಕಾರಣ ಕೇಳಿ ಮುಖದಲ್ಲೊಂದು ಮುಗುಳ್ನಗೆ ಮೂಡಿದ್ದೂ ಹೌದು. ಕಾರಣ ಕೊಟ್ಟವರ ಪ್ರಕಾರ ಆ ದಿನ ಶ್ರೀರಂಗಪಟ್ಟಣದ ಕಾವೇರಿ ತೀರದಲ್ಲಿ ಪಿಂಡಪ್ರದಾನ ಮಾಡುವವರ ಸಂದಣಿ ನೆರೆಯುವುದರಿಂದ ಮೈಸೂರಿನ ಕಾಗೆಗಳೆಲ್ಲಾ ಆ ಕಡೆ ಗುಳೆ ಹೋಗಿರಬಹುದೆಂದು ಅವರ ಅನುಮಾನ. ಯಾರಿಗೆ ಗೊತ್ತು, ಇರಬಹುದೇನೋ?

**ಶನೇಶ್ವರ ಅಂದರೆ ಮಂದವಾಗಿ ಚಲಿಸುವವನು ಎನ್ನುವ ಅರ್ಥ. ಒಂದೊಂದು ರಾಶಿಯಲ್ಲಿ ಎರಡೂವರೆ ವರ್ಷ ಹಾಯಾಗಿ ಠಿಕಾಣಿ ಹೂಡುವುದು ಅವನ ಜಾಯಮಾನ. ಈಗಂತೂ ಶನಿ ಯಾವ ದಿನ ಯಾವ ಹೊತ್ತಿಗೆ ಯಾವ ರಾಶಿಗೆ ಪ್ರವೇಶಿಸುತ್ತಾನೆ ಎನ್ನುವ ಕುರಿತಾದ ಮಾಹಿತಿ ಟೀವಿ ಹಾಕಿದರೆ ಸಾಕು, ನಿಮ್ಮ ಕಿವಿದೆರೆಗಳ ಮೇಲೆ ಬಿದ್ದೇ ಬೀಳುತ್ತದೆ...**

ನಮ್ಮ ಮಲೆನಾಡಿನ ಕಡೆ ಅಡಿಕೆಕುಯ್ಲು ಮುಗಿದ ಮೇಲೆ ಹಪ್ಪಳ ಸಂಡಿಗೆಗಳ ಕಾರ್ಖಾನೆ ಶುರುವಾಗುವುದು ಮಾಮೂಲು. ಮನೆ ಎದುರು ಅಡಿಕೆ ಒಣಗಿಸಲು ಹಾಕಿರುವ ದೊಡ್ಡ ಚಪ್ಪರದ ಮೇಲೆ ಬಾಳೆಹೆಡಲುಗಳ ಮೇಲೆ ಸಂಡಿಗೆ ಇಡುವ, ಹಪ್ಪಳ ಒಣಗಿಸುವ ಭರಾಟೆ. ಕಾಗೆಗಳು ಇವನ್ನು ಎಗರಿಸಿಕೊಂಡು ಹೋಗದಂತೆ ಕಾಪಿಟ್ಟುಕೊಳ್ಳಲು ಚಾಲ್ತಿಯಲ್ಲಿರುವ ಒಂದು ಉಪಾಯವನ್ನು ಈ ಹಿಂದೆ ಎಲ್ಲೋ ಪ್ರಸ್ತಾಪಿಸಿದ್ದೇನೆನ್ನುವ ನೆನಪು. ಇರಲಿ, ಇನ್ನೊಮ್ಮೆ ಹೇಳುವುದು ತಪ್ಪಾಗಲಿಕ್ಕಿಲ್ಲ. ಉದ್ದನೆಯ ಗಳುವೊಂದರ ತುದಿಯಲ್ಲಿ ಕಪ್ಪು ಬಣ್ಣದ ಬಟ್ಟೆಯೊಂದನ್ನು ಬಾವುಟದಂತೆ ನೇತಾಡಿಸಿ, ಆ ಗಳುವಿನ ಕೆಳ ತುದಿ ತಂಪಿನ ಅಂಗಳದಲ್ಲಿರುತ್ತದೆ. ಆಗೀಗ ಆ ಗಳವನ್ನು ಕೆಳಗಿಂದ ಅಲುಗಾಡಿಸಿಬಿಟ್ಟರೆ ಮೇಲ್ತುದಿಯಲ್ಲಿರುವ ಬಟ್ಟೆ ಅಲುಗಿ, ಕಾಗೆಗಳು ಅತ್ತ ಸುಳಿಯುವುದಿಲ್ಲವೆಂಬುದು ಅನುಭವದಿಂದ ಕಂಡುಕೊಂಡ ಉಪಾಯ. ಕಪ್ಪು ಬಣ್ಣದ ಬಟ್ಟೆಯಾದ್ದರಿಂದ ತಮ್ಮ ಸಂತತಿಯ ಯಾರನ್ನೋ ಬಡಿದು ನೇತಾಡಿಸಿದ್ದಾರೆ ಎಂದು ಕಾಗೆಗಳು ಭ್ರಮಿಸುತ್ತವೆಯಂತೆ. ಕಾಗೆ ಇಷ್ಟು ದಡ್ಡ ಪಕ್ಷಿಯಾ? 'ಕಾಗೆಯೊಂದು ಹಾರಿ ಬಂದು ಮರದ ಮೇಲೆ ಕುಳಿತುಕೊಂಡು, ಬಾಯಲಿದ್ದ ಮಾಂಸವನ್ನು ತಿನ್ನತೊಡಗಿತು...' ಎನ್ನುವ ಪದ್ಯ ನೆನಪಿಸಿಕೊಂಡರೆ ಹೌದು. ನರಿಯ ಹೊಗಳಿಕೆ ಮಾತಿಗೆ ಕಿವಿ ಜೋಲು ಬಿಟ್ಟು ಬಾಯಲ್ಲಿದ್ದ ಮಾಸದ ತುಣುಕನ್ನು ನರಿಯ ಪಾಲು ಮಾಡಿತು. ಅದೇ ಕಾಗೆ ಹೂಜಿಯ ತಳದಲ್ಲಿದ್ದ ನೀರು